# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲದ ಪ್ರಶ್ನೆ ಸಂಖ್ಯೆ | (383) 365 |
| ಸದಸ್ಯರ ಹೆಸರು | ಶ್ರೀ. ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ) |
| ವಿಷಯ | ಅಂಗವಿಕಲ ಮಾಸಾಶನದ ಬಗ್ಗೆ |
| ಉತ್ತರಿಸಬೇಕಾದ ದಿನಾಂಕ | 23.09.2020 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯದಲ್ಲಿ ಅಂಗವಿಕಲ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಅಂಗವಿಕಲ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ- 867707. |
| ಆ) ಪ್ರಸ್ತುತ ಸರ್ಕಾರ ನೀಡುತ್ತಿರುವ ಅಂಗವಿಕಲ ಮಾಸಾಶನ ಪ್ರಮಾಣ ಎಷ್ಟು; | ಪ್ರಸ್ತುತ ಸರ್ಕಾರವು ಶೇ.40 ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವರೆಗೆ ಮಾಸಿಕ ರೂ.600/- ಹಾಗೂ ಶೇ.75ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರೆಗೆ ಮಾಸಿಕ ರೂ.1400/- ಮಾಸಿಕ ಪಿಂಚಣಿ ನೀಡುತ್ತಿದೆ. |
| ಇ) ಕಳೆದ 6-7 ತಿಂಗಳುಗಳಿಂದ ಮಾಸಾಶನ ಬಿಡುಗಡೆಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅಸಮರ್ಪಕ ವಿಳಾಸ, ಪಿನ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಕೋಡ್ ಹೊಂದಿರುವ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಪಾವತಿಯಾಗದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಈ) ಹಾಗಿದ್ದಲ್ಲಿ, ಕೂಡಲೇ ಮಾಸಾಶನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | **ವಿಧ-1** ಈಗಾಗಲೇ ತಪ್ಪಾಗಿ ಬ್ಯಾಂಕ್ ಹಾಗೂ ಐ.ಎಫ್.ಎಸ್.ಸಿ ಕೋಡ್ ಅಳವಡಿಸಿದ ಪ್ರಕರಣಗಳಲ್ಲಿ ಪಾವತಿಯಾಗದೇ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ.<br><br>**ವಿಧ-2** ಖಜಾನೆ-1 ರಲ್ಲಿ ಪಿಂಚಣಿ ಪಡೆಯುತ್ತಿದ್ದು, ಅಸಮರ್ಪಕ ವಿಳಾಸ, ಪಿನ್‌ಕೋಡ್ ಕಾರಣ ಖಜಾನೆ-2 ಗೆ ವರ್ಗಾಯಿಸಲು ಸಾಧ್ಯವಾಗದ ಪ್ರಕರಣಗಳಲ್ಲಿ ಪಿಂಚಣಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.<br><br>ಸದರಿ ಫಲಾನುಭವಿಗಳನ್ನು ಕಡ್ಡಾಯವಾಗಿ ಭೌತಿಕ ಪರಿಶೀಲನೆಗೆ ಒಳಪಡಿಸಿ ನಿಖರವಾದ ಬ್ಯಾಂಕ್/ ಐ.ಎಫ್.ಎಸ್.ಸಿ ಕೋಡ್ ವಿವರ, ವಿಳಾಸ/ಪಿನ್‌ಕೋಡ್ ಮಾಹಿತಿ ಸಂಗ್ರಹಿಸಿ ತಂತ್ರಾಂಶದಲ್ಲಿ ಅಳವಡಿಸಲು ತಾಲ್ಲೂಕು ಮಟ್ಟದಲ್ಲಿ ಅವಕಾಶ ಕಲ್ಪಿಸಲಾಗಿದೆ. ತಹಸೀಲ್ದಾರರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. |

ಡಿಎಸ್‌ಎಸ್‌ಪಿ-ಎಲ್‌ಸಿಕ್ಯೂ- 9-2020

(ಆರ್. ಅಶೋಕ )
ಕಂದಾಯ ಸಚಿವರು